ಸೃಜನಿ

I S S N: 2583-3510

SIRDF JOURNALS

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 48-56
Bi-Monthly, Peer-Reviewed, Open Access, Indexed Journal

editor@srujani.in
www.srujani.in

# ಕಲ್ಯಾಣ ಚಾಲುಕ್ಯರ ಕಾಲದ ಶಾಸನೋಕ್ತ ತೂಕ ಮತ್ತು ಅಳತೆ ಮಾಪನಗಳು

**ಡಾ. ಮಂಜುನಾಥ ಕೆ. ಆರ್**

ಕನ್ನಡ ಭಾಷಾ ಅಧ್ಯಾಪಕರು, ಎಸ್. ಬಿ. ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.

***Abstract:***

*ಕಲ್ಯಾಣ ಚಾಲುಕ್ಯರು ಕ್ರಿ.ಶ. 973 ರಲ್ಲಿ ಪ್ರಾಬಲ್ಯಕ್ಕೆ ಬಂದು ಸುಮಾರು ಎರಡು ಶತಮಾನಗಳಿಗಿಂತ ಹೆಚ್ಚು ಕಾಲ ಸಾರ್ವಭೌಮಾಧಿಕಾರವನ್ನು ಅನುಭವಿಸಿ ದಕ್ಷಿಣ ಭಾರತದ ಕೆಲವು ಸಣ್ಣಪುಟ್ಟ ಮನೆತನಗಳು ತಮಗೆ ತಲೆಬಾಗುವಂತೆ ಮಾಡಿ ಸುವ್ಯವಸ್ಥಿತವಾಗಿ ಆಡಳಿತವನ್ನು ಮಾಡುವ ಮೂಲಕ ಉತ್ತಮವಾದ ಸಾಮ್ರಾಜ್ಯವನ್ನು ನಿರ್ಮಿಸಲು ಶ್ರಮಿಸಿದ ಪ್ರಮುಖ ರಾಜಮನೆತನವಾಗಿದೆ. ಪ್ರಸ್ತುತ ಲೇಖನದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನೋಕ್ತ ತೂಕ ಮತ್ತು ಅಳತೆ ಮಾಪನಗಳ ಮೇಲೆ ಬೆಳಕು ಚೆಲ್ಲಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಕರ್ನಾಟಕ ಇತಿಹಾಸ, ಕಲ್ಯಾಣ ಚಾಲುಕ್ಯರು, ಶಾಸನಗಳು, ತೂಕ ಮತ್ತು ಅಳತೆ ಮಾಪನಗಳು.*

## ಪೀಠಿಕೆ

ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವು ಪೂರ್ವದಲ್ಲಿ ಆಂಧ್ರಪ್ರದೇಶದ ವಿಶಾಖಪಟ್ಟಣವನ್ನೊಳಗೊಂಡಂತೆ ಗುಂಟೂರು ಜಿಲ್ಲೆಯವರೆಗೆ, ಪಶ್ಚಿಮದಲ್ಲಿ ಅರಬ್ಬಿಸಮುದ್ರದವರೆಗೆ, ದಕ್ಷಿಣದಲ್ಲಿ ಕಾವೇರಿ ನದಿಯ ದಡದಿಂದ, ಉತ್ತರದಲ್ಲಿ ನರ್ಮದಾ ನದಿಯವರೆಗೆ ವಿಸ್ತರಿಸಿಕೊಂಡಿತ್ತು. ಕ್ರಿ.ಶ. 973ರ ವೇಳೆಗೆ ರಾಷ್ಟ್ರಕೂಟರ ಸಾಮಂತನಾಗಿದ್ದ ಎರಡನೆಯ ತೈಲಪನು ಅವರನ್ನು ಸದೆಬಡಿದು ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಈ ರಾಜವಂಶದಲ್ಲಿ ಎರಡನೆಯ ತೈಲಪ, ಸತ್ಯಾಶ್ರಯ ಇರಿವೆಬೆಡಂಗ, ಐದನೆಯ ವಿಕ್ರಮಾದಿತ್ಯ, ಅಯ್ಯಣದೇವ, ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರ, ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲ, ಮೂರನೆಯ ತೈಲಪ, ಮೂರನೆಯ ಜಗದೇಕಮಲ್ಲ, ನಾಲ್ಕನೆಯ ಸೋಮೇಶ್ವರ ಇವರು ಪ್ರಮುಖ ದೊರೆಗಳಾಗಿ ಚಾಲುಕ್ಯ ಸಾಮ್ರಾಜ್ಯವನ್ನು ಕ್ರಿ.ಶ. 973 ರಿಂದ 1200 ರವರೆ ಆಳ್ವಿಕೆ ಮಾಡುತ್ತಾರೆ.

ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆಯಲ್ಲಿ ತೂಕ ಮತ್ತು ಅಳತೆ ಮಾಪನಗಳ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ. ಇವೆರಡು ವ್ಯಾಪಾರ ಸಾಮಾಗ್ರಿಗಳಾಗಿ ಕಂಡುಬರುತ್ತವೆ. ನಾಣ್ಯಗಳು ಕೊಡುಕೊಳ್ಳುವ ವಿನಿಮಯದ ವಸ್ತುಗಳಾದರೆ, ಪದಾರ್ಥಗಳನ್ನು ಅಳೆದು ತೂಗಿ ಕೊಡುವ ಪದ್ಧತಿಯನ್ನೇ 'ತೂಕ ಮತ್ತು ಅಳತೆ' ಎಂದು ಕರೆಯಲಾಗುತ್ತದೆ. ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ದವಸ ಧಾನ್ಯಗಳನ್ನು ತೂಕ ಮಾಡುವ ಮತ್ತು ಅಳತೆ ಮಾಡುವ ಪದ್ಧತಿ ಪ್ರಚಲಿತದಲ್ಲಿತ್ತು. ವಚನಗಳಲ್ಲಿ ತೂಗುವ ತಕ್ಕಡಿಗಳ ಉಲ್ಲೇಖವು ಬಂದಿದ್ದು, ಅವುಗಳನ್ನು 'ತ್ರಾಸ'

***Please cite this article as:*** ಮಂಜುನಾಥ ಕೆ. ಆರ್. (2024). ಕಲ್ಯಾಣ ಚಾಲುಕ್ಯರ ಕಾಲದ ಶಾಸನೋಕ್ತ ತೂಕ ಮತ್ತು ಅಳತೆ ಮಾಪನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 48–56

ಎಂದಿವೆ.[1] ಬಣಜಿಗರು ತೂಗಲು ಬೆನಕವನ್ನು ಉಪಯೋಗಿಸುತ್ತಿದ್ದುದರ ಉಲ್ಲೇಖ ಬಸವಣ್ಣನವರ ವಚನಗಳಲ್ಲಿ ಕಂಡುಬರುತ್ತದೆ. ತೂಕದ ಸರಕುಗಳನ್ನು ಕುರಿತು[2] 'ಅಳವ ತೂಗವಯ್ಯಂಬರಂಗಳಲುಂ ಎಣಿಸುವ ದವಸಂ' ಎಂದು ಹೇಳಿ ಮತ್ತು "ಭಣ್ಡವಂ ತೂಗಿಸಿ ಕೊಂಡಲ್ಲಿ" ಎನ್ನುವ ಹೇಳಿಕೆಗಳು ತೂಕದ ಸರಕುಗಳನ್ನು ಕುರಿತು ಸೂಚಿಸುತ್ತವೆ. ಸರಕುಗಳನ್ನು ತೂಗಲು[3] ಬಾರ, ಮಳವೆ, ಪಲ, ಬಿಸಿಗೆ, ಕೊಡಿಗೆ, ಬೆಲ್ಲಳಿಗೆ ಇನ್ನು ಮುಂತಾದ ತೂಕ ವಿಶೇಷಣ ವಸ್ತುಗಳನ್ನು ಬಳಸುತ್ತಿದ್ದರು.

ತೂಕದ ಮಾಪನಗಳನ್ನು ಕುರಿತು ರಾಜಾದಿತ್ಯನು ಈ ರೀತಿಯಾಗಿ ತಿಳಿಸಿದ್ದಾನೆ.

4 ಸುವರ್ಣ = 1 ಕರ್ಷ

4 ಕರ್ಷ = 1 ಪಲ

20 ಪಲ = 1 ಬಿಸಿಗೆ

5 ಬಿಸಿಗೆ = 1 ತೊಲಿ

20 ತೊಲಿ = 1 ಭಾರ

ಎಂದು ರಾಜಾದಿತ್ಯನು ತನ್ನ ಈ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.[4]

ತೂಕದ ವಿಷಯವನ್ನು ಕುರಿತು ಹೆಚ್ಚಾಗಿ ಶಾಸನಗಳು ಕಂಡುಬರುವುದಿಲ್ಲ. ಕೊಳಗ ಎನ್ನುವುದೇ ಅಳತೆ ಮಾನಗಳಲ್ಲಿ ಸಿಗುವ ಒಂದು ಮಾಪನವಾಗುತ್ತದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಂಡುಬರುವ ಒಂದು ಶಾಸನವು[5] ಜುಕ್ಕಿಕೊಳಗ, ಧರ್ಮಕೊಳಗ, ದನಗೊಳಗ ಎಂಬುದರ ತಿಳಿಸುತ್ತದೆ. ಈ ಊರಿನ ಪ್ರತಿಯೊಬ್ಬರು ಕೂಡ ಪೂಜಾರಿಗೆ, ದೋಣಿ ನಡೆಸುವವರಿಗೆ, ವರ್ಷಕ್ಕೆ ಇಂತಿಷ್ಟು ಎಂದು ರಾಗಿ, ಭತ್ತ ಮುಂತಾದ ದವಸ-ಧಾನ್ಯಗಳನ್ನು ನೀಡಬೇಕೆಂದು ನಿಗದಿಪಡಿಸಲಾಗಿತ್ತು. ಇದನ್ನು ದೇವಗೊಳಗ (ದೇವಕೋಳಗ)[6] ಎಂದು ಕರೆಯುತ್ತಾರೆ. ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಶಾಸನವೊಂದರಲ್ಲಿ[7] ಇವನ ದಂಡನಾಯಕ ಚಟ್ಟಪ್ಪಯ್ಯ ಎಂಬುವವನ ಹೆಸರನ್ನು ಉಲ್ಲೇಖಿಸುತ್ತಾ, ಸೌಟು, ಕೊಳಗ, ಸೊಲ್ಲಗೆ ಇನ್ನು ಮುಂತಾದ ಧಾನ್ಯದ ಅಳತೆಯ ಮಾಪನಗಳನ್ನು ಉಲ್ಲೇಖಿಸುತ್ತದೆ. ಶಾಸನದಲ್ಲಿ ಧಾನ್ಯಗಳಿಗೆ ಸಂಬಂಧಿಸಿದ ಅಳತೆ/ತೂಕದ ಮಾಪನವನ್ನು ತಿಳಿಯಬಹುದು. ಈ ರೀತಿಯಾಗಿ ಧಾನ್ಯ ಮತ್ತು ಎಣ್ಣೆ ಪದಾರ್ಥಗಳನ್ನು ಇವುಗಳಲ್ಲಿ ತುಂಬಿ ಅಳತೆ ಮಾಡುತ್ತಿದ್ದರು. ಅಕ್ಕಿ, ಭತ್ತ, ಮೆಣಸು, ಎಳ್ಳು, ಎಣ್ಣೆ ಮೊದಲಾವುಗಳನ್ನು ಅಳೆಯಲು ಬಳ್ಳ, ಮಾನ, ಸೊಲ್ಲಗೆ, ಅರ್ಧಸೊಲ್ಲಗೆ, ಸಟ್ಟುಗ, ಸೊಳಸ, ದಳ, ಹಾಸೆ, ಪಳಗೆ, ಖಂಡುಗ ಹೀಗೆ ಇನ್ನು ಮುಂತಾದವುಗಳನ್ನು ಅಳತೆ ಮಾಡಲು ಬಳಸುತ್ತಿದ್ದರು. ಇವುಗಳಲ್ಲಿ ಕೊಳಗವೇ ಅತ್ಯಂತ ದೊಡ್ಡ ಮಾಪನವಾಗಿತ್ತು. ಹಾನೆ/ದಳ ಎಂಬುದು ಅತಿ ಸಣ್ಣವಾದ ತೂಕದ ಮಾಪನವಾಗಿತ್ತು.

ಕ್ರಿ.ಶ. 1079ರ ಬಾಗಳಿ ಶಾಸನದಲ್ಲಿ[8]ದಾನ ಬಿಡುವಾಗ ತೂಗುವ ಮತ್ತು ಅಳೆಯುವುದನ್ನು ಕುರಿತು 'ಹಾರಿಕಾಯವಳದ ತೂಗುವ ಭಂಡಕ್ಕೆ ಹೊಂಗೆ ಹಾಗೆ–1, ಗಾಣವಾರಿ ಗಾಣಂಪ್ರತಿಮಾನ–1, ಉಪ್ಪುಕೊಳಗ–5' ಎಂದು ಉಲ್ಲೇಖಿಸುತ್ತದೆ.ರಾಜಾದಿತ್ಯನು ಶಾಸನಗಳಲ್ಲಿ ಕಂಡುಬರುವಂತಹ ಅಳತೆಯ ಮಾಪನಗಳನ್ನು ಕುರಿತು ತನ್ನ ಕೃತಿಯೊಂದರಲ್ಲಿ[9]ಈ ರೀತಿಯಾಗಿ ತಿಳಿಸಿದ್ದಾರೆ.

4 ಗಿದ್ದ = 1 ಸೊಲ್ಲಿಗೆ

4 ಸೊಲ್ಲಿಗೆ = 1 ಮಾನ

4 ಮಾನ = 1 ಬಳ್ಳ

4 ಬಳ್ಳ = 1 ಕೊಳಗ

20 ಕೊಳಗ = 1 ಖಂಡುಗ

ಹೀಗೆ ಅಳತೆ ಮಾಪನಗಳ ಬಗ್ಗೆ ತಿಳಿಯಲಾಗುತ್ತದೆ. ಬಟ್ಟೆ, ಹಣ್ಣು, ಕಬ್ಬು, ಅಡಿಕೆ ಇನ್ನು ಮೊದಲಾದ ಪದಾರ್ಥಗಳನ್ನು ಎಣಿಕೆ/ಏಣಿಸಿ ಕೊಡಲಾಗುತ್ತಿತ್ತು. ಬಳ್ಳಾರಿ ಜಿಲ್ಲೆಯ ಕುರುಗೋಡು ಶಾಸನದಲ್ಲಿ[10] ಬಳಕೆಯಾಗಿರುವ 'ಎಣಿಸುವ ದವಸಂ' ಎಂಬ ಪದಗಳು ಇವುಗಳನ್ನೇ ಕುರಿತು ಹೇಳುತ್ತವೆ.

ಅಂದರೆ ದವಸ ಧಾನ್ಯಗಳನ್ನು ಏಣಿಸಲಾಗುತ್ತಿತ್ತು ಎಂದು ತಿಳಿಸುತ್ತದೆ. ಎಲೆ, ಹುಲ್ಲು, ಕಾಯಿಪಲ್ಯ ಇನ್ನು ಮುಂತಾದವುಗಳನ್ನು ಸೂಡುಗಳಾಗಿ ಇಲ್ಲವೆ ಹೇರು(ಹೊರೆ)ಗಳಾಗಿ ಮಾಡಿ ಮಾರಾಟ ಮಾಡುತ್ತಿದ್ದರು.

ಕ್ರಿ.ಶ. 1078ರ ಮಹಾರಾಷ್ಟ್ರದ ನಾಂದೇಢ್ ಜಿಲ್ಲೆಯ ಊರಿಗೆಯ ಶಾಸನವು[11] ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದು, ಅವನ ದಂಡನಾಯಕನಾದ ಚಟ್ಟಪ್ಪಯ್ಯನ ಆಡಳಿತವನ್ನು ತಿಳಿಸುತ್ತಾ ಧಾನ್ಯಗಳನ್ನು/ಪದಾರ್ಥಗಳನ್ನು ಅಳೆಯುವ ಮಾಪನಗಳಾದ ಸೌಟು, ಕೊಳಗ, ಸೊಲ್ಲಗ ಎಂಬ ಅಳತೆ ಮಾಪನಗಳ ಹೆಸರುಗಳು ಕಂಡುಬರುತ್ತವೆ. ಇವುಗಳಲ್ಲಿ ಧಾನ್ಯಗಳನ್ನು, ಎಣ್ಣೆ, ತುಪ್ಪ, ಇನ್ನು ಮುಂತಾದ ಪದಾರ್ಥಗಳನ್ನು ಅಳೆಯಲು ಈ ಸಾಧನಗಳನ್ನು ಬಳಸುತ್ತಿದ್ದರು. ಕ್ರಿ.ಶ. 1162ರ ಮಹಾರಾಷ್ಟ್ರದ ವಂಗಿ ಶಾಸನವು[12] ಕಲ್ಯಾಣ ಚಾಲುಕ್ಯರ ಸಾಮಂತಾಧಿಕಾರಿಗಳಾದ ಕಲಚೂರಿ ವಂಶಕ್ಕೆ ಸೇರಿದ್ದು, ದೊರೆ ಬಿಜ್ಜಳನ ಆಡಳಿತವನ್ನು ಉಲ್ಲೇಖಿಸುತ್ತದೆ. ಅಳತೆ ಮಾಪನಗಳ ಬಗ್ಗೆ ತಿಳಿದುಕೊಳ್ಳಲು ಈ ಶಾಸನವು ಉತ್ತಮವಾದ ಆಕರವಾಗಿದೆ. ಈ ಶಾಸನದಲ್ಲಿ ಅಳತೆ ಮಾಪನಗಳಾದ ಸೊಲ್ಲಗೆ, ಅರ್ಧಸೊಲ್ಲಗೆ, ಹೇರು(ಕಟ್ಟು) ಹೆಡಗೆ (ಕಾಳುಗಡಿ, ಕಾಯಿಪಲ್ಲೆ, ಇತರೆ ಪದಾರ್ಥಗಳನ್ನು ಒಯ್ಯುವ ನಿರ್ದಿಷ್ಠ ಪ್ರಮಾಣದ ಬುಟ್ಟಿ) ಹೀಗೆ ಇತರೆ ಅಳತೆ ಮಾಪನಗಳು ಇಲ್ಲಿ ಕಂಡುಬರುತ್ತವೆ.

**ಭೂಮಾಪನ (ಉದ್ದಳತೆ)**

ಕಲ್ಯಾಣ ಚಾಲುಕ್ಯರು ಮತ್ತು ಅವರ ಮಾಂಡಳಿಕರ ಅರ್ಥವ್ಯವಸ್ಥೆಯಲ್ಲಿ ಭೂಮಾಪನದ ಪಾತ್ರವು ಅತ್ಯಂತ ಪ್ರಮುಖವಾಗಿದೆ. ಒಂದು ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ರಾಜನ ಬೊಕ್ಕಸಕ್ಕೆ ಬರುತ್ತಿದ್ದ ಬಹುಪಾಲು ತೆರಿಗೆಯು ಭೂ ಉತ್ಪಾದನೆಯಿಂದಲೆ ಬರುತ್ತಿತ್ತು. ಪ್ರಾಚೀನ ಕಾಲದಿಂದಲೂ ಭೂತೆರಿಗೆಗಳನ್ನು ವಿಧಿಸಬೇಕಾದರೆ ಭೂಮಿಯ ಫಲವತ್ತತೆ, ವಿಸ್ತಾರ ಇನ್ನು ಮುಂತಾದವುಗಳನ್ನು ಪರಿಗಣಿಸುವುದರ ಮೂಲಕ ಭೂಆದಾಯವನ್ನು ಸಂಗ್ರಹಣೆ ಮಾಡುತ್ತಿರುವುದು ಕಂಡುಬರುತ್ತದೆ. ಇದನ್ನು ಗಮನಿಸಿದರೆ ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಅಳತೆ ಗೋಲುಗಳಿಂದಲೆ ಅಳೆಯುವುದರ ಮೂಲಕ ಭೂಮಿಯ ವಿಸ್ತಾರ/ಸೀಮೆಯನ್ನು ಗುರುತಿಸುವ ಪ್ರಕ್ರಿಯೆಯು ಅಸ್ತಿತ್ವದಲ್ಲಿತ್ತು.

ರಾಜಾದಿತ್ಯನು ಉದ್ದಳತೆಯನ್ನು ಕುರಿತು ತನ್ನ ಕೃತಿಯಲ್ಲಿ[13] ಈ ರೀತಿಯಾಗಿ ಉಲ್ಲೇಖಿಸಿದ್ದಾನೆ.

12 ಬೆರಳು = 1 ಗೇಣು
2 ಗೇಣು = 1 ಮೊಳ
2 ಮೊಳ = 1 ಹಸ್ತ
4 ಮೊಳ = 1 ದಂಡ
200 ದಂಡ = 1 ಕ್ರೋಶ
400 ಕ್ರೋಶ = 1 ಯೋಜನೆ

ಎಂದು ತಿಳಿಸಿದ್ದಾರೆ. ಉದ್ದಳತೆಯನ್ನು ಕುರಿತಂತೆ ವಚನಕಾರರಾದ ಬಸವಣ್ಣನವರು[14] ತಮ್ಮ ವಚನಗಳಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

12 ಅಂಗುಲ = 1 ಗೇಣು
2 ಗೇಣು = 1 ಮೊಳ
2 ಮೊಳ = 1 ಹಸ್ತ
2 ಹಸ್ತ = 1 ಮಾರು
2 ಮಾರು = 1 ಜಂಪೆ
770 ಜಂಪೆ = 1 ಪದದಾಯಿ
2800 ಪದಚ್ಚಯ= 1 ತೂಗಳತೆ
4 ತೂಗಳತೆ = 1 ಹರದಾರಿ
4 ಹರದಾರಿ = 1 ಯೋಜನ

ಎಂದು ತಿಳಿಸಿದ್ದಾರೆ.

ಕ್ರಿ.ಶ. 1026ರ ಗದಗ ಜಿಲ್ಲೆಯ ಅಸುಂಡಿ ಗ್ರಾಮದ ಶಾಸನವು[15]ಉದ್ದಳತೆಯಲ್ಲಿ ಕಂಡುಬರುವ ಅಳತೆ ಮಾಪನವಾದ ಗೇಣಿನ ಉಲ್ಲೇಖವನ್ನು

ನೀಡುತ್ತದೆ. ಚಾಲುಕ್ಯ ರಾಜ ಎರಡನೇಯ ಜಯಸಿಂಹನ ಮಹಾಸಾಮಂತಾಧಿಪತಿಯಾದ ಸೌಚಯನಾಯಕನು ಭೋಗೇಶ್ವರದೇವರ ಅಂಗಭೋಗಕ್ಕಾಗಿ (ಅಭಿಷೇಕ, ಅರ್ಚನೆ, ಹೂವು, ಆಭರಣ) 28 ಗೇಣ ಗಳೆಯಲ್ಲಿ 6 ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿವರಣೆಯನ್ನು ನೀಡುತ್ತದೆ. ಶಿಲ್ಪಿ ರತ್ನಾಕರ ಎಂಬುವವನು **'**ಅಷ್ಟಸೂತ್ರ**'** ಎಂಬ ಕೃತಿಯಲ್ಲಿ[16] 8 ಅಳತೆ ಮಾನಗಳನ್ನು ಉಲ್ಲೇಖಿಸಿದ್ದು, ಅವುಗಳನ್ನು ಈ ರೀತಿಯಾಗಿ ತಿಳಿಸಿರುತ್ತಾರೆ.

ಅಳತೆ ಪಟ್ಟಿ
ಹಗ್ಗ
ಚಾರ್ದ (ಮುಂಜಿನ ದಾರ)
ಲಂಬಕ ತೂಗೂ ಗುಂಡು
ತ್ರಿಕೋಣಾಕೃತಿ
ಕೈವಾರ
ಮಟ್ಟಕೋಲು
ದೃಷ್ಟಿ ಆಲೋಕ

ಎಂದು ಹೇಳಿದ್ದಾರೆ. ಆದರೆ ಈ ಎಲ್ಲಾ ಅಳತೆ ಮಾಪನಗಳ ಬಗೆಗೆ ನಿಖರವಾದ ದಾಖಲೆಗಳು ದೊರೆತಿರುವುದಿಲ್ಲ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ[17] ಭೂಮಾಪನ ಸಾಧನಗಳನ್ನು ಕುರಿತು ಅಂಗುಲ ಹಸ್ತ, ಪ್ರಜಾಪತ್ಯ, ಧನುರ್ಗ್ರಹ, ಕಂಸ, ವ್ಯಾಮ, ಪೌರುಷ, ದಂಡ ರಜ್ಜುಪರಿದೇಶ, ನಿವರ್ತನ, ಧನು, ಗೋರುತ, ಯೋಜನ ಎಂದು ಭೂಮಾಪನ ಸಾಧನಗಳನ್ನು ಹೆಸರಿಸಿರುವುದು ಕಂಡುಬರುತ್ತದೆ.

**ಅಳತೆ ಕೋಲು**

ಕ್ರಿ.ಶ. 1138ರ ಬೀದರ್ ಜಿಲ್ಲೆಯ ಅಣಂದೂರು ಶಾಸನದಲ್ಲಿ[18] ನಿಗರಂ ಕೋಲು, ಕದಂಬ ಕೋಲು ಮತ್ತು ಕರಿದು ಕೋಲು ಎಂಬ ಮೂರು ಬಗೆಯ ವಿಭಿನ್ನ ಅಳತೆ ಕೋಲುಗಳ ಹೆಸರುಗಳು ಕಂಡುಬರುತ್ತವೆ. ಎರಡನೇ ಜಗದೇಕಮಲ್ಲನ ಆಡಳಿತದ ಅವಧಿಯಲ್ಲಿ ಗೋಪದೇವ ಎಂಬ ದಂಡಾಧೀಶನು ಊರಿನ ಉತ್ತರಕ್ಕೆ ಇರುವ ಗುರುಕುಂಟೆಯ ಸ್ಥಳದಲ್ಲಿ ಕಂಬಟಾಣದ ಗಡಿಂಬದಲ್ಲಿ [ಅಳತೆ ಕೋಲು] ನಿಗರಂ ಕೋಲಿನಲ್ಲಿ ನಾರಾಯಣದೇವರ ಪೂಜೆ ನೈವೇದ್ಯ ಮತ್ತು ಜೀರ್ಣೋದ್ಧಾರಕ್ಕಾಗಿ 2 ಮತ್ತರನ್ನು, ಊರಿನಲ್ಲಿರುವ ದೇವರಿಗೆ ನಿಗರಂಕೋಲಿನಲ್ಲಿ 3 ಮತ್ತರನ್ನು, ಬ್ರಾಹ್ಮಣ ವೃತ್ತಿಗಾಗಿ ಕರಿದು ಕೋಲಿನಲ್ಲಿ 6 ಮತ್ತರನ್ನು, ಮತ್ತು ಒಂದು ಮತ್ತರು ಗದ್ದೆಯನ್ನು ಹಾಗೂ ಕದಂಬ ಕೋಲಿನಲ್ಲಿ 20 ಮತ್ತರು ಭೂಮಿಯನ್ನು ಅಳೆದು ದಾನವಾಗಿ ನೀಡುತ್ತಾನೆ. ಹಾಗೆಯೇ ಬಿನ್ನಣಿಬಸವ ಎಂಬುವವನಿಗೆ ಕರಿದುಕೋಲಿನಲ್ಲಿ ಅಳೆದು 6 ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆಂದು ತಿಳಿದುಬರುತ್ತದೆ. ಹೀಗೆ ದಂಡನಾಯಕನು ದೇವರ ಸೇವೆಗಾಗಿ ಮತ್ತು ಬ್ರಾಹ್ಮಣರ ವೃತ್ತಿಗಾಗಿ ಈ ಅಳತೆ ಕೋಲುಗಳನ್ನು ಬಳಸಿ ಭೂಮಿಯ ಇಂತಿಷ್ಟು ಪ್ರಮಾಣವನ್ನು ದಾನವಾಗಿ ನೀಡಲಾಗಿದೆ. ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ರೂಗಿಯಲ್ಲಿ ದೊರೆತಿರುವ ಎರಡನೇ ಜಯಸಿಂಹನ ಶಾಸನವು[19] ಸಿಂಘನ ಗರುಡ ಎಂದು ಖ್ಯಾತಿಯನ್ನು ಪಡೆದ ಶ್ರೀಮಜ್ಜಗದೇಕ ಮಲ್ಲದೇವರ ಮಗ ಮಹಾ ಸಾಮಂತನಾದ ದಾಸರಸನ ಆಳ್ವಿಕೆಯ ಕಾಲದಲ್ಲಿ ದಸವರ್ಮನ ಕಾಲದಿಂದಲೂ ಬಳಕೆಯಲ್ಲಿರುವಂತಹ ತೆರೆ ಅಳತೆಯ ಹಿರಿಯಕೋಲಿನ ಉಲ್ಲೇಖವು ಬರುತ್ತದೆ. ಈ ಕೋಲಿನಿಂದ 150 ಮತ್ತರು ಭೂಮಿಯನ್ನು ಅಳೆದು ಪಂಡಿತರಿಗೆ ಈ ಸಾಮಂತನು ದಾನ ಬಿಡುತ್ತಾನೆ ಎಂದು ಈ ಶಾಸನದಿಂದ ತಿಳಿದುಬರುತ್ತದೆ.

ಕ್ರಿ.ಶ. 1028ರ ಗದಗ ಜಿಲ್ಲೆಯ ಹೊಸೂರು ಗ್ರಾಮದ ಶಾಸನದಲ್ಲಿ[20] ಮಲೆಪರಮಾರಿಯ ಕೋಲು ಎಂಬ ಅಳತೆಕೋಲಿನ ಹೆಸರು ಕಂಡುಬರುತ್ತದೆ. ಎರಡನೇ ಜಯಸಿಂಹನ ಕಾಲಾವಧಿಯಲ್ಲಿ ಆಯ್ಚುಗಾವುಂಡನು ತನ್ನ ಪತ್ನಿಯಾದ ಕಂಚಿಕಬ್ಬೆ ಗಾವುಂಡಿಗೆ ಪರೋಕ್ಷ ವಿನಯವಾಗಿ ಬಸದಿಯನ್ನು

ಮಾಡಿಸಿ ಮಲೆಪರಮಾರಿಯ ಕೋಲು ಎಂಬ ಅಳತೆ ಕೋಲಿನಲ್ಲಿ ಅಳೆದು ನಾಲ್ಕು ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ. ಗಾವುಂಡನೊಬ್ಬನು ತನ್ನ ಹೆಂಡತಿಗಾಗಿ ಭೂಮಿಯನ್ನು ಅಳತೆಕೋಲಿನಲ್ಲಿ ಅಳತೆಮಾಡಿ ದಾನ ನೀಡಿರುವುದು ಈ ಶಾಸನದ ವಿಶೇಷತೆಯಾಗಿದೆ. ಕ್ರಿ.ಶ. 981ರ ಕಂಚುಗಾರ ಬೆಳಗಲ್ಲು ಶಾಸನದಲ್ಲಿ[21]ಅಳತೆಕೋಲನ್ನು ಪಿರಿಯಕೋಲು ಎಂದು ಕರೆಯಲಾಗಿದೆ. ಚಾಲುಕ್ಯ ದೊರೆಯಾದ ತೈಲಪದೇವನ ಆಳ್ವಿಕೆಯಲ್ಲಿ ಅವನ ಸಾಮಂತನಾದ ವೀರನೊಳಂಬ ಪೆರ್ಮ್ಮಾಡಿದೇವನ ಹೆಂಡತಿಯಾದ ರೇವಲದೇವಿ ಎಂಬುವವಳು ವಿಷ್ಣುದೇವರಿಗೆ ಪಿರಿಯಕೋಲಿನಲ್ಲಿ ಭೂಮಿಯನ್ನು ಅಳೆದು 6 ಮತ್ತರು ಭೂದಾನ ನೀಡುತ್ತಾಳೆ ಎಂದು ಶಾಸನವು ತಿಳಿಸುತ್ತದೆ. ಹೀಗೆ ಈ ಶಾಸನವು ಅಳತೆ ಕೋಲನ್ನು ಕುರಿತು ಮಾಹಿತಿ ನೀಡುತ್ತದೆ.

ಕ್ರಿ.ಶ. 1140 ರ ಬಳ್ಳಾರಿ ಜಿಲ್ಲೆಯ ಕುಡಿತಿನಿ ಶಾಸನದಲ್ಲಿ[22] ನವಿಲು ಕೋಲು ಎಂಬ ಅಳತೆ ಮಾಪನದ ಹೆಸರು ಕಂಡುಬರುತ್ತದೆ. ಎರಡನೇಯ ಜಗದೇಕ ಮಲ್ಲದೇವನ ದಂಡನಾಯಕನಾದ ದುರ್ಗರಾಜನ ಮಗಳಾದ ಚಾವಣ ದೇವಿಯು ದುರ್ಗ್ಗೇಶ್ವರದೇವರಿಗೆ ನವಿಲು ಕೋಲಿನಲ್ಲಿ ಅಳೆದಂತಹ 476 ನವಿಲ ಮತ್ತರು ಭೂಮಿಯ ಪ್ರಮಾಣವನ್ನು ದಾನವಾಗಿ ನೀಡುತ್ತಾಳೆ. ಈ ದಾನವನ್ನು ಕುರಿತು 'ಚಾವಣದೇವಿ ದೇವರ್ಗ್ಗೆ ಬಿಟ್ಟ ಸ್ಥಳ.....ಮಯ್ಯನ ಕೆರೆಯಿ ಕೆಯಿಂ ನಾಯೂರು ಬೀವಮಣಿಯಗಾವುಂಡಗೆಯಿ ನವಿಲಮತ್ತರು ಕಮ್ಮ 476 ದಾನ ಭುಜೆ ಪಡುವ 60, ಬಡಗ 62, ಮೂ 40, ತೆಂ 30' ಎಂದು ಉಲ್ಲೇಖಿಸುತ್ತದೆ. ಅಂದರೆ ದಂಡನಾಯಕನ ಮಗಳಾದ ಚಾವಣದೇವಿಯು ಬೀವಮಣಿ ಎಂಬ ಗಾವುಂಡನಿಗೆ ನವಿಲಕೋಲಿನಲ್ಲಿ ಅಳೆದು ಭೂಮಿಯನ್ನು ದಾನವಾಗಿ ಬೀಡುತ್ತಾಳೆ. ದಾನ ಬಿಟ್ಟ ಭೂಮಿಯ ನಾಲ್ಕು ದಿಕ್ಕುಗಳ ಉಲ್ಲೇಖವು ಈ ಶಾಸನದಲ್ಲಿ ಕಂಡುಬರುತ್ತದೆ. ಕ್ರಿ.ಶ. 1147ರ ಬಾದಾಮಿ ತಾಲೂಕಿನ ತೆಗ್ಗಿ ಗ್ರಾಮದ ಶಾಸನವು[23] ಚಾಲುಕ್ಯ ರಾಜ ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಹುನಗುಂದ ಮೂವತ್ತರ ಸೀಮೆಯ ಆದಂಡಗೆ ಗ್ರಾಮವನ್ನು ಆಳುತ್ತಿದ್ದಂತಹ ಕಾಟಿಗಾವುಂಡ ಎಂಬುವವನನ್ನು ಹೆಸರನ್ನು ತಿಳಿಸುತ್ತಾ 'ಹಿರಿಯ ಕೋಲು' ಎಂಬ ಹೆಸರಿನ ಅಳತೆಕೋಲನ್ನು ಉಲ್ಲೇಖಿಸುತ್ತದೆ. ಈ ಅಳತೆಕೋಲಿನಿಂದ ಗಾವುಂಡನು ಭೂಮಿಯನ್ನು ಅಳೆದು ತಮ್ಮೂರಿನ ಕಲಿದೇವರಿಗೆ 3 ಮತ್ತರನ್ನು ದಾನವಾಗಿ ನೀಡುತ್ತಾನೆಂದು ತಿಳಿಸುತ್ತದೆ.

ಕ್ರಿ.ಶ. 1124ರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂಗೂರಿನಲ್ಲಿ ದೊರೆತಿರುವ ಶಾಸನವು[24] ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯ ಕಾಲದಲ್ಲಿ ಬನವಾಸಿಪುರವರೇಶ್ವರನಾದ ಕದಂಬಕುಲದ ಮಹಾಮಂಡಳೇಶ್ವರನಾದ ಮಾಧವತ್ತಿಯರಸ ಎಂಬುವವನ ಹೆಸರನ್ನು ತಿಳಿಸುತ್ತಾ, ಈ ಶಾಸನದಲ್ಲಿ ಮೂವತ್ತಾರು ಗೇಣ ಕೋಲಿನಲ್ಲಿ ಅಳೆದು ಎಂದು ಅಳತೆ ಕೋಲಿನ ಬಗ್ಗೆ ತಿಳಿಸುತ್ತಾ ಅಳತೆ ಕೋಲಿನಲ್ಲಿ ಮೂರು ಮತ್ತರು ಭೂಮಿಯನ್ನು ಅಳೆದು ದೇವರ ಧೂಪ ದೀಪ ನೈವೇದ್ಯಕ್ಕೆ ದಾನ ನೀಡುತ್ತಾನೆಂದು ಈ ಶಾಸನವು ಉಲ್ಲೇಖಿಸುತ್ತದೆ. ಶಾಸನದಿಂದ ತಿಳಿದು ಬರುವುದೆನೆಂದರೆ ದೇವರಿಗೆ ಭೂಮಿ ದಾನ ನೀಡುವಾಗಲೂ ಕೂಡ ಅಳತೆಗೋಲಿನಲ್ಲಿ ಅಳೆದು ದಾನ ನೀಡುತ್ತಿದ್ದರು ಎಂದು ತಿಳಿದುಬರುತ್ತದೆ. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ದೊರೆತಿರುವ ಶಾಸನವು[25] ಸಿಂಧರ ವಂಶದ ಗೋನರಸ ಎಂಬುವವನನ್ನು ಹೆಸರಿಸುತ್ತಾ ದಂಡನಾಯಕನಾದ ಮಾತ್ಯಾಂಡನ ಹೆಸರನ್ನು ಉಲ್ಲೇಖಿಸುತ್ತಾ, ಇಲ್ಲಿ ದೊರೆತಿರುವ ಶಾಸನದಲ್ಲಿ ನಾಲ್ವತ್ತುಗೇಣ ಫಳೆ ಎಂದು ಉಲ್ಲೇಖಿಸಲಾಗಿದೆ. ಇಲ್ಲಿ ಅಳತೆ ಮಾಪನವಾಗಿ ಗೇಣನ್ನು ಬಳಸಲಾಗಿದೆ. ಹೀಗೆ ಗೇಣಿನ ಮೂಲಕ 50 ಮತ್ತರು ಭೂಮಿಯನ್ನು ಅಳೆದು ದಾನವಾಗಿ ನೀಡಿರುವುದನ್ನು ಈ ಶಾಸನವು ತಿಳಿಸುತ್ತದೆ.

ರಾಯಚೂರು ಜಿಲ್ಲೆಯ ಇದೇ ತಾಲ್ಲೂಕಿನಲ್ಲಿ ದೊರೆತಿರುವ ಇನ್ನೊಂದು ಶಾಸನವು[26]1097ರ ಕಾಲಘಟ್ಟಕ್ಕೆ ಸೇರುತ್ತದೆ. ಈ ಶಾಸನವು ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಮಾಂಡಳಿಕನಾದ ಮಹಾಮಂಡಳೇಶ್ವರ ಸಿಂಧಕುಲದ ಬಾಚರಸನ ಹೆಸರನ್ನು ಉಲ್ಲೇಖಿಸುತ್ತಾ, ಅಳತೆ ಮಾಪನಗಳಾದ ಗೇಣ, ಗಳೆ, ಸಾಲಿಗುನ್ದೆಯ ಕಲಿಯಮಗೆರೆಯ ಕೋಲು, ಮಾಣಿಕೇಶ್ವರದ 24 ಗೇಣ ಕೋಲು ಎಂದು ತಿಳಿಸುತ್ತದೆ. ಬಹುಶಃ ಈ ಶಾಸನದಲ್ಲಿ ಬಳಕೆಯಾಗಿರುವ ಅಳತೆಕೋಲುಗಳು ಊರಿನ ಹೆಸರನ್ನು ಮತ್ತು ದೇವಾಲಯದ ಹೆಸರನ್ನು ಹೊಂದಿರುವ ಅಳತೆ ಕೋಲುಗಳಾಗಿದ್ದವು ಎಂದು ಹೇಳಲಾಗುತ್ತದೆ. ಆಂಧ್ರಪ್ರದೇಶದ ಮೆಹಬೂಬ್ ನಗರ ಜಿಲ್ಲೆಯಲ್ಲಿ ದೊರೆತಿರುವ ಶಾಸನವು[27] ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ತಿಳಿಸುತ್ತಾ ಮಾಹೇಶ್ವರ ಎಂಬ ದಂಡನಾಯಕನೊಬ್ಬನು ನೀಡಿದ ದತ್ತಿಯೊಂದು ಹೇಳುತ್ತದೆ. ಈ ಶಾಸನದಲ್ಲಿ ಸಣಿವಾರಸಿದ್ಧಿಯಕೋಲು ಎಂಬ ಅಳತೆಕೋಲಿನ ಹೆಸರು ಬಂದಿದ್ದು, ಈ ಕೋಲಿನ ಮೂಲಕ ಭೂಮಿಯನ್ನು ಅಳೆದು ದತ್ತಿಯಾಗಿ ನೀಡಲಾಗುತ್ತಿತ್ತು. ಈ ಅಳತೆ ಕೋಲು ಸನಿವಾರ ಎಂಬ ವಾರದ ಹೆಸರಿನ್ನು ಹೊಂದಿರುವುದು ಆಶ್ಚರ್ಯಕರ ವಿಭಿನ್ನವಾಗಿರುತ್ತದೆ.

ಬಿಜಾಪುರ ಜಿಲ್ಲೆ ಬಿಜಾಪುರ ತಾಲೂಕಿನಲ್ಲಿ ದೊರೆತಿರುವ ಶಾಸನವು[28] ಚಾಲುಕ್ಯ ಚಕ್ರವರ್ತಿಯಾದ ಜಗದೇಕಮಲ್ಲದೇವನ ಆಳ್ವಿಕೆಯ ಕಾಲವನ್ನು ತಿಳಿಸುತ್ತಾ, ಗೋಮಭೂಪಾಲ ಎಂಬುವವನ ಹೆಸರನ್ನು ಉಲ್ಲೇಖಿಸುತ್ತದೆ. ಹಾಗೂ ಈ ಶಾಸನವು ರಾಜನ ಮಹಾಮಂಡಳೇಶ್ವರನಾದ ಯಾದವ ವಂಶದ ಹೆಮ್ಮಡಿ ಅರಸನ ಹೆಸರನ್ನು ತಿಳಿಸುತ್ತದೆ. ಇದೊಂದು ವಿಶಿಷ್ಟವಾದ ಶಾಸನವಾಗಿದೆ. ಕಾರಣ ಗೋಮಭೂಪಾಲನ ಹೆಸರಿನಲ್ಲಿ ಅಳತೆ ಕೋಲನ್ನು ನಿರ್ಮಿಸಲಾಗಿದೆ. ಇದರಿಂದ ತಿಳಿದುಬರುವ ಅಂಶವೇನೆಂದರೆ ವ್ಯಕ್ತಿಯ ಹೆಸರಿನಲ್ಲಿಯೂ ಕೂಡ ಅಳತೆಕೋಲುಗಳಿರುವುದು ಕಂಡುಬರುತ್ತದೆ. ಈ ಅಳತೆಕೋಲಿನಿಂದ ಭೂಮಿಯನ್ನು ಅಳೆದು ದಾನ ನೀಡಲಾಗುತ್ತದೆ. ಈ ಶಾಸನದಲ್ಲಿ ಅಳತೆ ಕೋಲನ್ನು 'ಕೊಂಡಿರೆವ ಗೋಮನ ಗಡಿಂಬ' ಎಂದು ಕರೆಯಲಾಗಿದೆ. ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಭೂಯಾರ್ನಲ್ಲಿ ದೊರೆತಿರುವ ಶಾಸನವು[29] ಕಳಚೂರಿ ದೊರೆ ತ್ರಿಭುವನಮಲ್ಲನ ಪ್ರಧಾನಿಯಾದ ಲಕ್ಷ್ಮೀದೇವ ದಂಡನಾಯಕನ ಹೆಸರನ್ನು ಉಲ್ಲೇಖಿಸುತ್ತಾ ಮಾಣಿಕೇಶ್ವರದ ಕೋಲು ಎಂಬ ಹೆಸರಿನ ಅಳತೆಕೋಲನ್ನು ಹೆಸರಿಸುತ್ತದೆ. ಈ ಕೋಲಿನಲ್ಲಿ ಭೂಮಿಯನ್ನು ಅಳೆದು ದಂಡನಾಯಕನು ತನ್ನ ಹೆಗ್ಗಡೆಯಾದ ನಾಗಣ್ಣನಾಯಕ ಹಾಗೂ ಮಾಚಗಾವುಂಡನ ಸಮ್ಮುಖದಲ್ಲಿ ಬಸವಯ್ಯ ಎಂಬುವವನಿಗೆ ಭೂದಾನ ನೀಡಿದನೆಂದು ಈ ಶಾಸನವು ದಾಖಲಿಸುತ್ತದೆ.

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮನಗೂಳಿಯಲ್ಲಿ ದೊರೆತಿರುವ ಶಾಸನವು[30] 1161 ರ ಕಾಲಘಟ್ಟಕ್ಕೆ ಸೇರಿದ್ದು, ಇದರಲ್ಲಿ ಮೂರು ಬಗೆಯ ಅಳೆಯ ಕೋಲುಗಳ ಹೆಸರುಗಳು ಕಂಡುಬರುತ್ತವೆ. ಅವುಗಳೆಂದರೆ

1. ಕಟ್ಟಿದಲಗಿನ 40 ಗೇಣ ಹಂದಿಯ ಗಡಿಂಬ
2. ಹಾರುವ ಗೋಲು
3. ನಾಲ್ಗೇಣ ಪ್ರಮಾಣಿಕ ಕೈ ಎಂಬ ಹೆಸರಿನ ಅಳತೆ ಕೋಲುಗಳ ಉಲ್ಲೇಖಿಸುತ್ತದೆ. ಈ ಎಲ್ಲಾ ಅಳತೆ ಕೋಲುಗಳನ್ನು ಬಳಸಿ ಭೂಮಿಯನ್ನು ಅಳತೆ ಮಾಡಿ ಭೂದಾನ ಮಾಡುತ್ತಿದ್ದರು ಎಂದು ಶಾಸನದಿಂದ ಮಾಹಿತಿ ತಿಳಿದುಬರುತ್ತದೆ. ಕಲ್ಯಾಣ ಚಾಲುಕ್ಯರು ಮತ್ತು ಅವರ ಮಾಂಡಲಿಕರ ಆರ್ಥಿಕ ವ್ಯವಸ್ಥೆಯಲ್ಲಿ ತೂಕ ಮತ್ತು ಅಳತೆ ಮಾಪನಗಳ ಉಲ್ಲೇಖಗಳು ಕಂಡುಬಂದಿವೆ. ಇವುಗಳಲ್ಲದೇ ಇನ್ನು ಅನೇಕ ರೀತಿಯ ಅಳತೆ ಮಾಪನಗಳು ಬಳಕೆಯಲ್ಲಿದ್ದವು. ಈ ಅವಧಿಯಲ್ಲಿ ಅಂತರ, ಕಾಲಮಾನ, ಕಟ್ಟಡ, ನಿವೇಶನ, ಮೇರೆ ಇನ್ನು

ಮೊದಲಾದವುಗಳನ್ನು ಅಳೆಯುವ ಪದ್ಧತಿಯು ಅಸ್ತಿತ್ವದಲ್ಲಿದ್ದುದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

ಶಾಸನಗಳಲ್ಲಿ ಎರಡು ಪ್ರದೇಶಗಳ ನಡುವಿನ ಅಂತರವನ್ನು ಪತ್ತೆ ಹಚ್ಚಲು/ಅಳತೆ ಮಾಡಲು ಅಳತೆ ಮಾಪನವನ್ನು ಬಳಸಿರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕ್ರೋಶ,[31] ಗವ್ಯೂತಿ,[32] ಪುಟ್ಟ,[33] ಎಂಬ ಪದಗಳು ಕೆಲವು ಶಾಸನಗಳಲ್ಲಿ ಬಳಕೆಯಾಗಿದ್ದು, ಇವು 2 ಪ್ರದೇಶಗಳ ನಡುವಿನ ಅಂತರವನ್ನು ಅಳೆಯಲು ಬಳಸುತ್ತಿದ್ದ ಅಳತೆ ಮಾಪನಗಳಾಗಿವೆ. ಸೋಮೇಶ್ವರನ ಮಾನಸೋಲ್ಲಾಸವು[34] ಕಾಲಮಾನದ ಬಗೆಗೆ ಘಳಿಗೆ, ವಾರ, ತಿಂಗಳು, ವರ್ಷ, ಗತಶತಕಗಳನ್ನು ಲೆಕ್ಕ ಹಾಕುವ ಕ್ರಮವನ್ನು ವಿವರಿಸಿರುವುದು ಕಂಡುಬರುತ್ತದೆ. ಈ ಹೇಳಿಕೆಗೆ ಪುಷ್ಠಿಕರಣ ಎನ್ನುವಂತೆ ಶಾಸನಗಳಲ್ಲಿ ಮಾಹಿತಿ ದೊರಕುತ್ತದೆ. ಘಳಿಗೆ,[35] ತಿಂಗಳು,[36] ಪಲ,[37] ಇನ್ನು ಮುಂತಾದ ಪದಗಳು ಶಾಸನಗಳಲ್ಲಿ ಬಳಕೆಯಾಗಿರುವ ಕಾಲಮಾನದ ಸೂಚಕ ಪದಗಳಾವೆ. ಆಘಾಟ,[38] ಚತುರಘಾಟ,[39] ಚತಃ ಸೀಮಾಘಾಟ[40] ಎಂಬ ಪದಗಳು ಕೆಲವು ಶಾಸನಗಳಲ್ಲಿ ಬಳಕೆಯಾಗಿದ್ದು, ಇವು ಮೇರೆಗಳನ್ನು ಸೂಚಿಸುವ ಪದಗಳಾಗಿದ್ದವು. ಕೆಲವೊಂದು ಶಾಸನಗಳಲ್ಲಿ ಭೂ ಗುರುತಿಗಾಗಿ ಕಲ್ಲುಗಳನ್ನು ನಿಲ್ಲಿಸುವುದು/ ಹಾಕುವುದರ ಮೂಲಕ ತಮ್ಮ ತಮ್ಮ ಹೊಲ ಮತ್ತು ನಿವೇಶನವನ್ನು ಕಂಡುಹಿಡಿಯುತ್ತಿದ್ದರು. ಉದಾಹರಣೆಗಾಗಿ ಹೇಳುವುದಾದರೆ ಧರ್ಮದ ಕಲ್ಲು[41] ಲಿಂಗದ ಕಲ್ಲು[42] ಕವಿಲೆಯಕಲ್ಲು ಎಂಬ ಕಲ್ಲುಗಳ ಹೆಸರು ಶಾಸನಗಳಲ್ಲಿ ಕಂಡುಬರುತ್ತದೆ.

ಹೀಗೆ ಕಲ್ಯಾಣ ಚಾಲುಕ್ಯರು ಮತ್ತು ಅವರ ಮಾಂಡಳಿಕ ಅರಸರ ಆರ್ಥಿಕ ವ್ಯವಸ್ಥೆಯಲ್ಲಿ ತೂಕ ಮತ್ತು ಅಳತೆ ಮಾಪನಗಳ ಹೆಸರುಗಳು ಕಂಡುಬರುತ್ತವೆ. ಹಾಗೂ ಇವರ ಕಾಲದಲ್ಲಿಯೇ ರಾಜ್ಯದ ಅಂತರ, ಕಾಲ, ಸೀಮೆ ಮೊದಲಾದವುಗಳನ್ನು ನಿರ್ಧರಿಸಲು ವಿವಿಧ ಅಳತೆ ಮಾಪನಗಳನ್ನು ಇವರು ತಮ್ಮ ಆಡಳಿತಾವಧಿಯಲ್ಲಿ ಬಳಸಿರುವುದು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆಯಲ್ಲಿ ಆರ್ಥಿಕತೆಯನ್ನು ನಿರ್ಧರಿಸು ಅಂಶಗಳಲ್ಲಿ ತೂಕ ಮತ್ತು ಅಳತೆ ಮಾಪನಗಳು ಪ್ರಮುಖ ಪಾತ್ರವಹಿಸುತ್ತವೆ. ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆಯಲ್ಲಿ ಮಾಂಡಳಿಕ ಅಧಿಕಾರಿಗಳು ರಾಜನ ಕೈಕೆಳಗಿನ ಅಧಿಕಾರಿಗಳಾಗಿದ್ದು, ಆಡಳಿತದಲ್ಲಿ ಆಜ್ಞಾಪಾಲಕರಾಗಿ ಸೇವೆಮಾಡುತ್ತಿದ್ದರು. ಇವರು ಕೃಷಿ, ಭೂಕಂದಾಯ, ತೆರಿಗೆ ವ್ಯವಸ್ಥೆ, ನಾಣ್ಯವ್ಯವಸ್ಥೆ ಹಾಗೂ ತೂಕ ಮತ್ತು ಅಳತೆ ಮಾಪನ ಹೀಗೆ ಇನ್ನು ಹಲವು ಅಂಶಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಹೀಗಾಗಿ ರಾಜ್ಯದ ಆರ್ಥಿಕತೆಯನ್ನು ಹೆಚ್ಚಿಸುವಲ್ಲಿ ಮತ್ತು ಕಡಿಮೆ ಮಾಡುವಲ್ಲಿ ಚಾಲುಕುರ ಸಾಮಂತ ಅರಸರ ಪಾತ್ರ ಅತ್ಯಂತ ಮಹತ್ವವಾಗಿತ್ತು.ಈ ಮೇಲಿನವುಗಳಂತೆ ಚಾಲುಕ್ಯರ ಕಾಲದ ಉಲ್ಲೇಖಿತ ಶಾಸನಗಳಲ್ಲಿ ಕಂಡುಬರುವ ತೂಕ ಮತ್ತು ಅಳತೆ ಮಾಪನಗಳನ್ನು ಈ ಲೇಖನದ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಕೊನೆ ಟಿಪ್ಪಣಿಗಳು**

1. ನಾರಾಯಣ ಪಿ.ವಿ. (1983). ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ. ವೀರಶೈವ ಅಧ್ಯಯನ ಸಂಸ್ಥೆ. ಪುಟ. 184.
2. ಸೌತ್ ಇಂಡಿಯನ್ ಇನಸ್ಕ್ರಿಪ್ಷನ್ಸ್. ಸಂಪುಟ.9, ಭಾಗ,1 ನಂ.297
3. ಹಿರೇಮಠ ಬಿ. ಆರ್. (1986) *ಶಾಸನಗಳಲ್ಲಿ ಕರ್ನಾಟಕದ ವರ್ತಕರು.* ಪುಟ. 130
4. ಮರಿಯಪ್ಪಭಟ್ಟ ಎಂ. (ಸಂ.) (1955). *ರಾಜಾದಿತ್ಯನ ವ್ಯವಹಾರ ಗಣಿತ,* ಪುಟ. 1–25.
5. ಎಪ್ಪಿಗ್ರಫಿಯಾ ಕರ್ನಾಟಿಕಾ. ಸಂ.4, ನಂ.83
6. ನಾಗರಾಜು ಡಿ. ಎಂ. (2012). *ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಗೌತಮ ಪ್ರಕಾಶನ. ಪುಟ. 84.

7. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–6, (2001) *ಮಹಾರಾಷ್ಟ್ರದ ಕನ್ನಡ ಶಾಸನಗಳು*, ಶಾ.ಸಂ–66, ಪುಟ. 91.
8. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.9, ಭಾಗ,1 ನಂ.145
9. ಮರಿಯಪ್ಪಭಟ್ಟ ಎಂ. (ಸಂ.) (1955). ಪೂರ್ವೋಕ್ತ. ಪಟ. 1–26.
10. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.9, ಭಾಗ,1 ನಂ.297
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–6, (2001) *ಮಹಾರಾಷ್ಟ್ರದ ಕನ್ನಡ ಶಾಸನಗಳು*, ಶಾ.ಸಂ–66, ಪುಟ. 91.
12. *ಅದೇ.* ಶಾ.ಸಂ–160, ಪುಟ. 263.
13. ಮರಿಯಪ್ಪಭಟ್ಟ ಎಂ. (ಸಂ.) (1955). ಪೂರ್ವೋಕ್ತ. ಪುಟ. 1–28
14. ಉಮಾಪತಿ. (ಸಂ.). ಬಸವಣ್ಣನವರ ಹೆಚ್ಚಿನ ವಚನ, ಸಂಪುಟ–2, ಪುಟ.47.
15. ನಾಗಯ್ಯ ಜೆ.ಎಂ., (ಸಂ.). (2011). *ಕಲ್ಯಾಣ ಚಾಲುಕ್ಯರ ಶಾಸನಗಳು ಸಂ–1*, ಶಾ.ಸಂ–47, ಪುಟ. 249.
16. ಜಗದೀಶ. (2005). ಮೆಸರ್‌ಮೆಂಟ್ ಸಿಸ್ಟಮ್ ಇನ್ ಕರ್ನಾಟಕ. ಅಪ್ರಕಟಿತ ಪ್ರೌಢ ಪ್ರಬಂಧ, ಕುವೆಂಪು ಯೂನಿವರ್ಸಿಟಿ. ಪುಟ.110.
17. ಶ್ರೀ ಕೂಡಲೀ ಶೃಂಗೇರಿ ಜಗದ್ಗುರು ಮತ್ತು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು (ಅನು.). (1963) *ಕೌಟಿಲ್ಯ ಅರ್ಥಶಾಸ್ತ್ರ.* ಪುಟ. 171–172.
18. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–8, (2006) *ಬೀದರ್ ಜಿಲ್ಲೆ,* ಶಾ.ಸಂ–63, ಪುಟ. 172.
19. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.20, ನಂ.21
20. ನಾಗಯ್ಯ ಜೆ.ಎಂ., (ಸಂ.). (2011). *ಕಲ್ಯಾಣ ಚಾಲುಕ್ಯರ ಶಾಸನಗಳು ಸಂ–1,* ಶಾ.ಸಂ–51, ಪುಟ. 255.
21. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.9, ನಂ.74
22. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.9, ನಂ.199
23. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–8, (2006) *ಬಾಗಲಕೋಟೆ ಜಿಲ್ಲೆ,* ಶಾ.ಸಂ–25, ಪುಟ. 166
24. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–7, (2006) *ರಾಯಚೂರು ಜಿಲ್ಲೆ,* ಶಾ.ಸಂ–1, ಪುಟ. 123
25. ಅದೇ, ಶಾ.ಸಂ–9, ಪುಟ. 364.
26. ಅದೇ, ಶಾ.ಸಂ–7, ಪುಟ. 358.
27. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–5. (2001) *ಆಂಧ್ರಪ್ರದೇಶದ ಕನ್ನಡ ಶಾಸನಗಳು.* ಭಾಗ– 2, ಶಾ.ಸಂ–506, ಪುಟ. 168.
28. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.28, ನಂ.161
29. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.20, ನಂ.138
30. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.15, ನಂ.101
31. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.8, ನಂ.179
32. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.18, 10 ಸೆಂಚುರಿ.
33. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.3, ನಂ.32
34. ಕಲಬುರ್ಗಿ ಎಂ. ಎಂ., (ಸಂ.). (1998). *ಸೋಮೇಶ್ವರನ ಮಾನಸೋಲ್ಲಾಸ.* ಕರ್ನಾಟಕ ವಿಶ್ವವಿದ್ಯಾಲಯ. ಪುಟ. 46–47.
35. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.2(ಆರ್). ನಂ.156
36. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–6. (2001). *ಮಹಾರಾಷ್ಟ್ರದ ಕನ್ನಡ ಶಾಸನಗಳು.* ಶಾ.ಸಂ–63, ಪುಟ. 89.
37. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.15, ನಂ.10
38. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.6, ನಂ.4
39. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.15, ನಂ.128
40. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.20, ನಂ.158
41. ಸೌತ್ ಇಂಡಿಯನ್ ಇನಸ್ಕ್ರಿಪ್ಸನ್ಸ್. ಸಂಪುಟ.7, ನಂ.213
42. ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ.11, ನಂ.110

**ಪರಾಮರ್ಶನ ಗ್ರಂಥಗಳು**


- ಎಫಿಗ್ರಫಿಯಾ ಕರ್ನಾಟಿಕಾ. ಆರ್ಕೀಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ.
- ಹಿರೇಮಠ ಬಿ.ಆರ್. (1989). *ಶಾಸನಗಳಲ್ಲಿ ಕರ್ನಾಟಕದ ವರ್ತಕರು.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಕಲಬುರ್ಗಿ ಎಂ.ಎಂ., (ಸಂ), (1998) ಸೋಮೇಶ್ವರ ವಿರಚಿತ, **ಮಾನಸೋಲ್ಲಾಸ,** ಸಂಪುಟ–1, 2, ಕರ್ನಾಟಕ ವಿಶ್ವವಿದ್ಯಾಲಯ.
- ಕೂಡಲೀ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು. (2005). *ಕೌಟಿಲ್ಯನ ಅರ್ಥಶಾಸ್ತ್ರ.* ಅಂಕಿತ ಪುಸ್ತಕ.
- ಮರಿಯಪ್ಪಭಟ್ಟ ಎಂ., (ಸಂ.) (1955). *ರಾಜಾದಿತ್ಯನ ವ್ಯವಹಾರ ಗಣಿತ.* ಶ್ರೀವತ್ಸ ಮುದ್ರಾಣಾಲಯ.
- ನಾಗಯ್ಯ ಜೆ. ಎಮ್. (1987). *ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ.* ಕರ್ನಾಟಕ ವಿಶ್ವವಿದ್ಯಾಲಯ.
- ನಾಗರಾಜು ಡಿ.ಎಂ. (2012). *ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಗೌತಮ ಪ್ರಕಾಶನ.
- ರಿತ್ತಿ ಶ್ರೀನಿವಾಸ್. (ಸಂ.) (2000). *ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ.* ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- *ಶಾಸನ ಸಂಪುಟಗಳು.* (2006). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಾಸುದೇವ ಬಡಿಗೇರ. (2012). *ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.